


## ಜ್ಯೋತಿ ಗುರುಪ್ರಸಾದ

ಕಲೆ: ಜಬೀವುಲ್ಲಾ ಎಂ. ಅಸದ್


# ಫಲಿತಾಂಶ



ಕಡಲಲೆ ಕಾಲು ಸೋಕುವುದು
ಮತ್ತೆ ಹಿಂದೆ ಸರಿಯುವುದು
ಒಮ್ಮೆ ಹನಿ ಹನಿ ಸಿಂಚನ
ಮತ್ತೊಮ್ಮೆ ದೂರ ಸರಿಯುವ ಆಟ
ಉಕ್ಕುವುದು ಇಳಿಯುವುದು
ದಿನಚರಿಯ ಭಾಗ

ಅಂತೆಯೇ ಸೂರ್ಯ ನಿತ್ಯ
ಮೂಡುವ ಮುಳುಗುವ ಕಾಯಕದಲ್ಲಿ
ತೊಡಗುವುದು

ನಡುವೆ ನಿಂತ ನಾನು
ಕಲಿಕೆಯಲ್ಲಿ ತೊಡಗಿರುವೆ
ಮನೋಭೂಮಿಕೆಯಲ್ಲಿ ಕಡಲು–ಸೂರ್ಯ
ಆಳಕ್ಕೆ ವಿಸ್ತಾರಕ್ಕೆ ಹೊಂಬಿಸಿಲಿಗೆ
ಪ್ರಖರ ಬೆಳಕಿಗೆ ಸುಡುವ ಬಿಸಿಲಿಗೆ
ರೂಪಕವಾಗುವುದು

ನಾನಾದರೋ ಕಡಲನ್ನು
ಕಣ್ಣಲ್ಲಿ ತುಂಬಿಕೊಂಡು
ಬೆಳಕನ್ನು ಎದೆಗೆ ತಂದುಕೊಂಡು
ಜೀವನವ ಮಥಿಸುತ್ತಿರುವೆ
ನಿಖರ ಕಣ್ಣೋಟ
ಕರುಣೆಯಲಿ ಮಿಂದೆದ್ದು
ಜೀವಜಲ ತುಂಬಿಕೊಂಡು
ಎದೆ ಬೆಳಕು
ಪ್ರೇಮವನ್ನು ಮಾತ್ರ ಪಸರಿಸುತ್ತ
ಸುಡು ಬೆಂಕಿಯಾಗದೆ ಪ್ರಜ್ವಲಿಸುತ್ತಿದೆ
ಕಲಿಕೆಯ ಫಲಿತಾಂಶವಾಗಿ.